# ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆ: 69/2024

**ಸಾಕ್ಷಿಯನ್ನು ದಿಃ 10.03.2025 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

| | | | |
|---|---|---|---|
| ಹೆಸರು | ಹೆಚ್.ಕೆ ನಂದೀಶ್ | ಸಿ.ಡಬ್ಲ್ಯೂ: 1 | ಪಿ.ಡಬ್ಲ್ಯೂ: 1 |
| ತಂದೆಯ ಹೆಸರು | ಲೇಟ್ ಹೆಚ್.ಪಿ ಕುಮಾರ್ | | |
| ವಯಸ್ಸು | 45ವರ್ಷ | | |
| ಕೆಲಸ | ವ್ಯಾಪಾರ | | |
| ವಾಸಸ್ಥಳ | ಹುಣಸೂರು | | |

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**

1. ಚಾಸಾ–2 ರಿಂದ 8ರವರ ಪರಿಚಯ ಇದೆ. ಆರೋಪಿತರ ಪರಿಚಯ ಇದೆ. ಈಗ ನೋಡುತ್ತಿರುವ ದಾಖಲೆಯಲ್ಲಿ ನನ್ನ ಸಹಿ ಇದೆ. ಸದರಿ ದಾಖಲೆ ದೂರನ್ನು ನಿಪಿ.1 ಎಂದು, ಸಾಕ್ಷಿಯ ಸಹಿಯನ್ನು ನಿಪಿ.1(ಎ)ಎಂದು ಗುರುತಿಸಲಾಯಿತು. ಮತ್ತೊಂದು ದಾಖಲೆ ಮಹಜರ್ ನಿಪಿ.2 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ.2(ಎ)ಎಂದು ಗುರುತಿಸಲಾಯಿತು.

2. ನನಗೆ ಬೀಜಗನಹಳ್ಳಿ ಗ್ರಾಮದಲ್ಲಿ ಸರ್ವೇ ನಂಬರ್ 87/12ರಲ್ಲಿ 20 ಗುಂಟೆ 87/13ರಲ್ಲಿ 5ಗುಂಟೆ ಜಮೀನು ನನ್ನ ಹೆಸರಿನಲ್ಲಿರುತ್ತದೆ. ದಿಃ 24.08.2022ರಂದು ಸದರಿ ಜಮೀನುಗಳನ್ನು ಖರೀದಿ ಮಾಡಿ ನನ್ನ ಪತ್ನಿ ಚಾಸಾ–4ರವರು ನನಗೆ ದಾನಪತ್ರದ ಮೂಲಕ ನನ್ನ ಹೆಸರಿಗೆ ಕೊಟ್ಟಿರುತ್ತಾರೆ.

3. ದಿಃ 21.11.2023ರಲ್ಲಿ ಬೆಳಿಗ್ಗೆ 10.00ಗಂಟೆ ಸಮಯದಲ್ಲಿ ಸರ್ವೇ ನಂಬರ್ 87/13ರಲ್ಲಿ ಉಳುಮೆ ಮಾಡಲು ಹೋದಾಗ ಆರೋಪಿತರು ಗುಂಪು ಕಟ್ಟಿಕೊಂಡು ಬಂದು ನನ್ನ ಜಮೀನಿನಲ್ಲಿ ಉಳುಮೆ ಬಿಡದೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. ಚಾಸಾ–5ರವರು ಸದರಿ ಜಮೀನಿಗೆ ಟ್ರಾಕ್ಟರ್ ಅನ್ನು ತಂದು ಉಳುಮೆ ಮಾಡಲು ಬಂದಿದ್ದು ಅವರನ್ನು ಸಹ ತಡೆದು ತೊಂದರೆ ಕೊಟ್ಟಿರುತ್ತಾರೆ. ಚಾಸಾ–6ರಿಂದ 8ರವರು ನನ್ನನ್ನು ಕರೆದುಕೊಂಡು ಬಂದು ಠಾಣೆಯಲ್ಲಿ ದೂರು ನೀಡಲು

21.11.2023ರಂದು ನಿಪಿ.1ರಂತೆ ದೂರು ಸಲ್ಲಿಸಿದ್ದೇನೆ. ನಂತರ ಅದೇ ದಿನಾಂಕದಂದು ಪೋಲೀಸರು ನಾನು ಸ್ಥಳ ತೋರಿಸಿದ ಕೃತ್ಯ ನಡೆದ ಸ್ಥಳದ ಮಹಜರ್ ಅನ್ನು ಚಾಸಾ-2, 3ರವರ ಸಮಕ್ಷಮ ಮದ್ಯಾಹ್ನ 2.30-3.00ರವರೆಗೆ ಜರುಗಿಸಿ ನನ್ನ ಸಹಿ ಪಡೆದಿರುತ್ತಾರೆ. ಸದರಿ ಪಂಚನಾಮೆಯ ವಿಚಾರಗಳು ನನಗೆ ಗೊತ್ತಿವೆ.

**(ಈ ಹಂತದಲ್ಲಿ ಮಾನ್ಯ ಸಅಅ ಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿ ತನ್ನ ಸಾಕ್ಷ್ಯವನ್ನು ಅಭಿಯೋಜನೆಗೆ ಭಾಗಶಃ ಪ್ರತಿಕೂಲವಾಗಿ ನುಡಿದಿರುವ ಕಾರಣ ಅವರನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಸಲಾಯಿತು)**

## ಪಾಟೀಸವಾಲುಃ ಮಾನ್ಯ ಸಸಅ ರವರಿಂದಃ

4. ಆರೋಪಿತರು ಸದರಿ ದಿನಾಂಕದಂದು ನನ್ನನ್ನು ತಳ್ಳಿ ಬೀಳಿಸಿ ಪುನಃ ನೀನು ಜಮೀನಿನ ಒಳಗೆ ಬಂದರೆ ಕೊಲೆ ಮಾಡದೆ ಬಿಡುವುದಿಲ್ಲ ಎಂದು ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ. ನ್ಯಾಯಾಲಯದ ಮುಂದಿರುವ ಆರೋಪಿತರನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

## ಪಾಟೀಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಅವರಿಂದ-

5. ನಾನು ಎಸ್.ಎಸ್.ಎಲ್.ಸಿ ವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ಜಮೀನನ್ನು ನನ್ನ ಪತ್ನಿ ತೆಗೆದುಕೊಂಡಿದ್ದರು. ಜಮೀನು ಖರೀದಿ ಮಾಡಲು ಹಣವನ್ನು ನನ್ನ ಪತ್ನಿಯೇ ನೀಡಿದ್ದರು. ಸದರಿ ಜಮೀನನ್ನು ನನ್ನ ಪತ್ನಿಯ ತಂದೆ ನೋಡಿ ಅವರೆ ನನ್ನ ಪತ್ನಿಗೆ ಕೊಡಿಸಿದ್ದರು ಎಂದರೆ ಸರಿ. ಸದರಿ ಜಮೀನು ಕೊಂಡು ಕೊಳ್ಳುವ ಸದರಿ ಜಮೀನಿನ ಮಾಹಿತಿ ನನಗೆ ಇರಲಿಲ್ಲ ಎಂದರೆ ಸರಿ. ನನ್ನ ಪತ್ನಿ ಸದರಿ ಜಮೀನನ್ನು ಖರೀದಿ ಮಾಡುವಾಗ ಸದರಿ ಜಮೀನಿನ ದಾಖಲಾತಿಗಳನ್ನು ನಾನು ಸಹ ನೋಡಿದ್ದೆ.

**6.** ನಾನು ನೋಡಿದ ದಾಖಲೆ ಪ್ರಕಾರ ಸದರಿ ಜಮೀನು ರತ್ನಕಾಳಮ್ಮ ಎಂಬುವವರಿಗೆ ಕೋರ್ಟ್ ಡಿಕ್ರಿ ಮೂಲಕ ಬಂದಿತ್ತು. ಅದು ಯಾವ ಕೇಸಿನ ಡಿಕ್ರಿ ಎಂದು ನನಗೆ ಹೇಳಲು ಬರುವುದಿಲ್ಲ. ಸದರಿ ಡಿಕ್ರಿ ಪ್ರಕಾರ ನಾವು ಖಾತೆ ಮಾಡಿಸಿಕೊಂಡಿದ್ದೇವು ಎಂದರೆ ಸರಿ. ಆ ಜಮೀನು ರತ್ನಕಾಳಮ್ಮ ಅವರಿಗೆ ಪಿತ್ರಾರ್ಜಿತವಾಗಿ ತಮ್ಮ ಗಂಡನ

ಮನೆಯಿಂದ ಬಂದಿತ್ತು. ರತ್ನಕಾಳಮ್ಮರವರಿಗೆ ಆ ಜಮೀನು ಯಾವ ಕೇಸ್ ನಂಬರ್ ಮೂಲಕ ಬಂದಿತ್ತು ಎಂದು ವಿವರಗಳು ನನಗೆ ಗೊತ್ತಿಲ್ಲ. ನನ್ನ ದೂರಿನಲ್ಲಿ ರತ್ನಕಾಳಮ್ಮರವರಿಗೆ ಸದರಿ ಜಮೀನು ಬಂದಿತ್ತು ಎಂದು ವಿವರಗಳನ್ನು ಕಾಣಿಸಿರುವುದಿಲ್ಲ.

**7.** ನಿಪಿ.1ರ ದೂರಿನ ಜೊತೆ ನಾನು ಈಗ ಹೇಳಿದ ಡಿಕ್ರಿ ಪ್ರತಿಯನ್ನು ಪೋಲೀಸರ ಮುಂದೆ ಹಾಜರುಪಡಿಸಿರಲಿಲ್ಲ ಕಾರಣ ಇದು ನನ್ನ ಜಮೀನಾಗಿತ್ತು. ಆರೋಪಿಗಳ ಜಮೀನು ನನ್ನ ಪತ್ನಿ ಕೊಂಡುಕೊಂಡರು ಎನ್ನಲಾದ ಜಮೀನು ಅಕ್ಕಪಕ್ಕದಲ್ಲಿವೆ ಎಂದರೆ ಸರಿ. ಆರೋಪಿಗಳು ಈಗ ಹೇಳಿದಂತ ಪಕ್ಕದ ಜಮೀನಿನ ಸ್ವಾಧೀನದಲ್ಲಿ ಸುಮಾರು 60-70 ವರ್ಷಗಳಿಂದ ಇದ್ದಾರೆ ಎಂದರೆ ನನಗೆ ಮಾಹಿತಿ ಇಲ್ಲ.

8. ಜಮೀನು ಕೊಳ್ಳುವ ಮೊದಲು ನಾನು ಸದರಿ ಜಮೀನನ್ನು ನೋಡಿದ್ದೆ. ನಾನು ಆ ರೀತಿ ನೋಡಿದ ಸಮಯದಲ್ಲಿ ಜಮೀನು ರತ್ನಕಾಳಮ್ಮರವರ ಹೆಸರಿನಲ್ಲಿತ್ತು ಮತ್ತು ಅದರಲ್ಲಿ ರಾಗಿ ಬೆಳೆದಿದ್ದರು. ರತ್ನಕಾಳಮ್ಮರವರೆ ತಾವು ಸ್ವಾಧೀನದಲ್ಲಿರುವುದಾಗಿ ನಮಗೆ ತಿಳಿಸಿದ್ದರು. ರತ್ನಕಾಳಮ್ಮರವರು ಸದರಿ ಜಮೀನಿನ ಸ್ವಾಧೀನದಲ್ಲಿರುವ ಬಗ್ಗೆ ರತ್ನಕಾಳಮ್ಮರವರ ಸಂಬಂಧಿಯವರಲ್ಲಿ ಕೇಳಿ ತಿಳಿದುಕೊಂಡಿದ್ದೆ.

**ಮುಂದುವರಿದ ಪಾಟೀಸವಾಲುಃ ಆರೋಪಿ ಪರ ವಕೀಲರು ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಜೈಬುನ್ನಿಸಾ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.